ವಿಜಯ ಕರ್ನಾಟಕ VK ನಮ್ಮ ಬಳ್ಳಾರಿ

## ಬಳ್ಳಾರಿ ಮ್ಯೂಜಿಯಂನಲ್ಲಿ ಪ್ರಾಗೈತಿಹಾಸಿಕ ಕುರುಹಗಳ ಅಡಕ

# ಕೊರೊನಾ ಇಳಿಕೆ, ಪ್ರವಾಸಿಗರು ಏರಿಕೆ

■ **ಅಮೃತ ವರ್ಷಿಣಿ** ಬಳ್ಳಾರಿ

ಪ್ರಾಗೈತಿಹಾಸಿಕ ಕಾಲದ ನೆಲೆಗಳಾಗಿದ್ದ ಜಿಲ್ಲೆಯ ಕೆಲ ಪ್ರದೇಶಗಳ ಅಪೂರ್ವ ವಸ್ತುಗಳ ಸಂರಕ್ಷಣೆಗೆ ಸ್ಥಾಪನೆಯಾಗಿರುವ ಬಳ್ಳಾರಿಯ ಮ್ಯೂಜಿಯಂಗೆ ಕೋವಿಡ್ ಬಳಿಕ ಭೇಟಿ ನೀಡುವವರ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿದೆ.

ತಾಲೂಕಿನ ಸಂಗನಕಲ್ಲು ಗುಡ್ಡಗಳಲ್ಲಿ ನವಶಿಲಾಯುಗದ ಮಾನವ ನೆಲೆಸಿರುವ ಬಗ್ಗೆ ಹಲವು ಕುರುಹುಗಳು ಹಾಗೂ ಜಿಲ್ಲೆಯ ಪ್ರಾಗೈತಿಹಾಸಿಕ ನೆಲೆಗಳ ಅವಶೇಷಗಳ ರಕ್ಷಣೆಗೆ ಜಿಲ್ಲಾಡಳಿತ ಕಳೆದ ಮೂರು ವರ್ಷಗಳ ಹಿಂದೆ 60ಲಕ್ಷ ರೂ. ವೆಚ್ಚದಲ್ಲಿ ನಗರದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಚ್ಯವಸ್ತು ಸಂಗ್ರಹಾಲಯ ಸ್ಥಾಪಿಸಿದೆ.

**ಇಲ್ಲಿ ಏನೇನಿದೆ?:** ಕರ್ನಾಟಕದ ಚರಿತ್ರೆಯಲ್ಲಿ ಐತಿಹಾಸಿಕ ಸ್ಥಾನ ಪಡೆದಿರುವ ಬಳ್ಳಾರಿಯ ಸಂಗನಗಲ್ಲು ಬಹಳ ಪ್ರಾಮುಖ್ಯತೆ ಪಡೆದಿದ್ದು, ಇಲ್ಲಿ ಆದಿಮಾನವನ ಎಲುಬು, ಪ್ರಾಣಿ, ಪಕ್ಷಿ, ಸಸ್ಯಗಳ ಅವಶೇಷಗಳು, ಶಿಲಾಯುಧಗಳು, ಬಂಡೆ ಮೇಲೆ ಬಿಡಿಸಿದ ಚಿತ್ರಗಳು, ಮಡಕೆ, ಕುಡಿಕೆಗಳು ಸೇರಿ ಇತರ ವಸ್ತು ಹಾಗೂ ಸಂಗತಿಗಳು ನವಶಿಲಾಯುಗದ ಮಾನವನ ಬದುಕನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಸಲುವಾಗಿ ಮ್ಯೂಜಿಯಂ ಸ್ಥಾಪಿಸಿದ್ದು, ಕೊರೊನಾ ಅಬ್ಬರ ಇಳಿಕೆಯಾದಂತೆ ಪ್ರವಾಸಿಗರು, ಯಾತ್ರಿಕರ ಭೇಟಿ ಸಂಖ್ಯೆ ಹೆಚ್ಚಳ ಕಂಡಿದೆ.

**ಕಲಾಕೃತಿಯೇ ಲೋಗೊ:** ಆದಿಮಾನವರ ಬದುಕು, ಸಂಸ್ಕೃತಿ ಪರಿಚಯಿಸುವ, ಕ್ರಿ.ಪೂ.4000ದಿಂದ ಕ್ರಿ.ಪೂ. 1000 ಇಸ್ವಿಗೆ ಸೇರಿದ ಅವಶೇಷಗಳು ಸೇರಿ ಎಲ್ಲ ವಸ್ತುಗಳನ್ನು ಮ್ಯೂಸಿಯಂನಲ್ಲಿ ಅಚ್ಚುಕಟ್ಟಾಗಿ ಜೋಡಿಸಿ ಪ್ರದರ್ಶನಕ್ಕಿಡಲಾಗಿದೆ. ಮ್ಯೂಜಿಯಂ ಸಂಗನಕಲ್ಲಿನ ಶಿಲಾಯುಗದ ಮಾನವ ಬಂಡೆಯ ಮೇಲೆ ಕೆತ್ತಿದ ಕಲಾಕೃತಿಯನ್ನೇ ತಮ್ಮ ಲೋಗೊವಾಗಿಟ್ಟುಕೊಂಡಿದ್ದು ಜನರನ್ನು ಆಕರ್ಷಿಸುತ್ತಿದೆ.

**ರಿಸರ್ಚ್‌ಗೆ ಅನುಕೂಲ:** ಈ ಮ್ಯೂಜಿಯಂ ಕೇವಲ ಭಾಷೆ ಬಲ್ಲವರಿಗೆ, ಬಾರದಿರುವವರಿಗೆ ಅರ್ಥವಾಗುವಂತೆ ಆಂಗ್ಲ ಮತ್ತು ಸ್ಥಳೀಯರಿಗೆ ಕನ್ನಡ ಭಾಷೆಯಲ್ಲಿ ವಿವರಣೆ ನೀಡಲಾಗಿದೆ. ಅಂಧರಿಗೆ ಸಂಗ್ರಹಾಲಯದ ವಸ್ತುಗಳ ಮಾಹಿತಿ ನೀಡುವ ಉದ್ದೇಶದಿಂದ ಬ್ರೇನ್ ಲಿಪಿ ತಂತ್ರಜ್ಞಾನ ಅಳವಡಿಸಿರುವುದು ವಿಶೇಷವಾಗಿದೆ. ಸಂಶೋಧನಾ ವಿದ್ಯಾರ್ಥಿಗಳ ಅನುಕೂಲಕ್ಕೆ ಮ್ಯೂಜಿಯಂನ ಪ್ರತಿ ವಸ್ತುಗಳ ವಿವರಣೆ ನೀಡಲಾಗಿದೆ.

**ಆಕರ್ಷಕ ಶವಪೆಟ್ಟಿಗೆ:** ಪ್ರೊ.ರವಿಕೋರಿ ಶೆಟ್ಟರ್ ಅವರ ನೇತೃತ್ವದ ರಿಸರ್ಚ್ ತಂಡ ಕುಡಿತಿನಿಯ ಬಳ್ಳಾರಿ ಸ್ಟೀಲ್ ಪ್ಲಾಂಟ್ ಬಳಿ ಪತ್ತೆ ಹಚ್ಚಿದ ಶವಪೆಟ್ಟಿಗೆಯನ್ನು ಮ್ಯೂಸಿಯಂನಲ್ಲಿ ಸಂಗ್ರಹಿಸಿಡಲಾಗಿದ್ದು, ನೋಡುಗರ ಗಮನ ಸೆಳೆಯುತ್ತಿದೆ. ಇದರಲ್ಲಿ 7ವರ್ಷದ ಮಗುವಿದ ಅಸ್ಥಿಪಂಜರವನ್ನು ಪ್ರದರ್ಶನಕ್ಕಿಡಲಾಗಿದೆ. ಇಲ್ಲಿನ ಪುರಾತನ ಕಲ್ಲಿನ ಮಡಕೆಗಳು, ಆದಿಮಾನವರು ಉಪಯೋಗಿಸಿದಂತಹ ಕೃಷಿ ಉಪಕರಣಗಳನ್ನಿಡಲಾಗಿದೆ.

**ಹೆಚ್ಚು ಜನ ವೀಕ್ಷಣೆ:** ಕಳೆದ ಮೂರು ವರ್ಷಗಳಿಂದ ಆರಂಭಗೊಂಡ ಮ್ಯೂಸಿಯಂ ಪ್ರಾರಂಭದಲ್ಲಿ ಹೆಚ್ಚಿನ ಜನರನ್ನು ಆಕರ್ಷಿಸಿತ್ತು. ಬಳಿಕ ಎರಡು ವರ್ಷಗಳಿಂದ ಕೊರೊನಾ ಎಫೆಕ್ಟ್‌ನಿಂದ ಜನರ ವೀಕ್ಷಣೆಗೆ ಬ್ರೇಕ್ ಬಿದ್ದಿತ್ತು. ಈಗ ಮೂರನೇ ಅಲೆ ತಗ್ಗುತ್ತಿದ್ದಂತೆ ಮ್ಯೂಸಿಯಂನಲ್ಲಿ ವೀಕ್ಷಣೆಗೆ ಅವಕಾಶ ನೀಡಿದೆ. ಶಾಲಾ, ಕಾಲೇಜು ವಿದ್ಯಾರ್ಥಿಗಳು ಪ್ರತಿನಿತ್ಯ ಭೇಟಿ ನೀಡುವ ಮೂಲಕ ನವಶಿಲಾಯುಗದ ಪಳಿಯುಳಿಕೆಗಳನ್ನು ವೀಕ್ಷಿಸು ತ್ತಿರುವುದು ಕಂಡು ಬಂದಿದೆ. ಪ್ರತಿನಿತ್ಯ ವಸ್ತು ಸಂಗ್ರಹಾಲಯಕ್ಕೆ ನಿತ್ಯವೂ ಅಧಿಕ ಜನ ಭೇಟಿ ನೀಡುತ್ತಿರುವುದು ಕಂಡು ಬಂದಿದೆ.



ಬಳ್ಳಾರಿಯ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿರುವ ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪ್ರಾಚ್ಯವಸ್ತು ಸಂಗ್ರಹಾಲಯ.

- ಕೋವಿಡ್ ಬಳಿಕ ಮ್ಯೂಜಿಯಂನಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳ
- ಪಳೆಯುಳಿಕೆ ವೀಕ್ಷಣೆಗೆ ಅಂಧರಿಗೆ ಬ್ರೈನ್‌ಲಿಪಿ ಮೂಲಕ ಮಾಹಿತಿ
- ಆಕರ್ಷಿಸುತ್ತಿದೆ ನಾಲ್ಕು 4 ಸಾವಿರ ವರ್ಷಗಳ ಹಿಂದಿನ ಶವಪೆಟ್ಟಿಗೆ



### ಮ್ಯೂಜಿಯಂ ವೈಶಿಷ್ಟ್ಯತೆ

ಪೂರ್ವ ಶಿಲಾಯುಗದ ಶಿಲೆ ಹಾಗೂ ಅದರ ರೂಪಾಂತರ, ಆಯುಧಗಳು ಹಾಗೂ ಆಫ್ರಿಕಾದಿಂದ ತಂದಿರಿಸಿದ ಆದಿ ಮಾನವರ 14 ತಲೆಬುರುಡೆಗಳು, ಆಭರಣ ಹಾಗೂ ತಮ್ಮ ದೈನಂದಿನ ಜೀವನಶೈಲಿಯಲ್ಲಿ ಉಪಯೋಗಿಸಲ್ಪಡುವ ಎಲ್ಲ ರೀತಿಯ ಉಪಕರಣಗಳಿದ್ದು, ಚರಿತ್ರೆಯ ವೈಶಿಷ್ಟ್ಯತೆ ಆಕರ್ಷಕವಾಗಿದೆ. ಮ್ಯೂಸಿಯಂನ ಎರಡನೇ ಮಹಡಿಯಲ್ಲಿ ಆದಿಮಾನವನ ಇತಿಹಾಸ ಹೊಂದಿದ ಉಪಕರಣಗಳು ಅಚ್ಚರಿ ಉಂಟು ಮಾಡಲಿವೆ. ಸಂಗನಕಲ್ಲಿನ ಹಿರೇಗುಡ್ಡದಲ್ಲಿ ದೊರೆತ ಡಾಲರೈಟ್ ಮತ್ತು ಪೆಗ್ಮಾಟೈಟ್ ಕಲ್ಲುಗಳು, ಬೂದಿ ದಿಬ್ಬಗಳು, ನವಶಿಲಾಯುಗದ ಚಿತ್ರಣಗಳು, ಶಬ್ದ ಚಿಮ್ಮುವ ಬಂಡೆಗಳ ಕುರುಹುಗಳು, ಅಂದಿನ ಮಕ್ಕಳ ಆಟಿಕೆಗಳು ಪ್ರವಾಸಿಗರ ಗಮನ ಸೆಳೆಯುತ್ತಿವೆ.

**ಅತಿಯಾದ ಮೈನಿಂಗ್‌ನಿಂದ ನವಶಿಲಾಯುಗದ ಅತ್ಯಂತ ಅಮೂಲ್ಯವಾದ ಕುರುಹುಗಳು ಸಂಗನಕಲ್ಲಿನಲ್ಲಿ ಎಲ್ಲಿ ಮಾಸಿ ಹೋಗಲಿವೆಯೋ ಎಂಬ ಭಯ ಇತ್ತು. ತಂತ್ರಜ್ಞಾನ ಬಲದಿಂದ ಶೀಘ್ರ ಸಂಗ್ರಹಣೆ ಮಾಡಿದ್ದು,ಈ ಕಾರ್ಯಕ್ಕೆ ಬಳ್ಳಾರಿ ಜಿಲ್ಲಾಡಳಿತ ಸಾಥ್ ನೀಡಿತು. ಹೀಗಾಗಿ ಪ್ರಾಗೈತಿಹಾಸಿಕ ಕುರುಹುಗಳು ಒಂದೆಡೆ ಸುರಕ್ಷಿತವಾಗಿ ಮ್ಯೂಜಿಯಂನಲ್ಲಿ ಸಂಗ್ರಹಗೊಂಡಿವೆ. ಮುಂದಿನ ಸಂಶೋಧನಾ ಪೀಳಿಗೆ ಇನ್ನಷ್ಟು ಪ್ರೇರಣೆಗೊಂಡು ಅನ್ವೇಷಣೆ ಮಾಡಬೇಕೆಂಬುದು ನನ್ನ ಆಶಯವಾಗಿದೆ**

\- **ಪ್ರೊ.ರವಿಕೋರಿ ಶೆಟ್ಟರ್**, ವಿಶ್ರಾಂತ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯ ವಸ್ತು ಅಧ್ಯಯನ ವಿಭಾಗ, ಧಾರವಾಡ ವಿಶ್ವವಿದ್ಯಾಲಯ